Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**

ವಿಶೇಷ ಸಂಚಿಕೆ

| | |
|---|---|
| **भाग–IX** | **अनुभाग 1** |
| PART IX | SECTION 1 |
| ಭಾಗ IX | ವಿಭಾಗ 1 |

**प्राधिकार से प्रकाशित**

Published by Authority

ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| **सं–1** | **नई दिल्ली मंगलवार मार्च–13 1984** | **रुधिरोद्गारि 1905 (शक)** | **खण्ड–1** |
| No. 1 | New Delhi Tuesday, March 13, 1984 | Rudhirodgari-1905 (Saka) | Vol. 1 |
| ಸಂಖ್ಯೆ ೧ | ನವದೆಹಲಿ ಮಂಗಳವಾರ, ಮಾರ್ಚ್ ೧೩, ೧೯೮೪ | ರುಧಿರೋದ್ಗಾರಿ-೧೯೦೫ (ಶಕ) | ಸಂಪುಟ ೧ |


## MINISTRY OF LAW, JUSTICE & COMPANY AFFAIRS

### (Legislative Department)

New Delhi, September 16, 1983/Rudhirodgari 1905 (Sakha)

The translations in Kannada of the foloowing namely—(1) The wakf Act, 1954, (2) The Railway property (unlawful possession) Act, 1966 (3) The Telegraph wires (unlawful possession) Act, 1950 (4) The Disputed Elections (Prime minister and speaker) Act, 1977 (5) The Dock workers (Regulation of employment) Act, 1943 are hereby published under the authority of the president and shall be deemed to be the authorised translations thereof in Kannada under clause (a) of Section 2 of the authorised Translations (central lwas) Act, 1973 (50 of 1973).

---

ಕೆಳಕಂಡ ಅಧಿನಿಯಮಗಳ ಎಂದರೆ,–(೧) ವಕ್ಫ್ ಅಧಿನಿಯಮ ೧೯೫೪ (೨) ರೈಲ್ವೆ ಸ್ವತ್ತಿನ (ಕಾನೂನು ವಿರುದ್ಧ ಸ್ವಾಧೀನ) ಅಧಿನಿಯಮ, ೧೯೬೬ (೩) ಟೆಲಿಗ್ರಾಫ್ ತಂತಿಗಳು (ಕಾನೂನು ವಿರುದ್ಧ ಸ್ವಾಧೀನ) ಅಧಿನಿಯಮ, ೧೯೫೦ (೪) ಪ್ರಧಾನ ಮಂತ್ರಿ ಮತ್ತು ಅಧ್ಯಕ್ಷರ) ವಿವಾದಿತ ಚುನಾವಣಾ ಅಧಿನಿಯಮ, ೧೯೭೭ (೫) ಹಡಗುಕಟ್ಟೆ ಕೆಲಸಗಾರರ (ನಿಯೋಜನಾ ವಿನಿಮಯಗಳು) ಅಧಿನಿಯಮ, ೧೯೪೮–ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ (ಕೇಂದ್ರ ಕಾನೂನುಗಳ) ಅಧಿನಿಯಮ, ೧೯೭೩ (೧೯೭೩ ರ ೫೦) ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

# ರೈಲ್ವೆ ಸ್ವತ್ತಿನ (ಕಾನೂನು ವಿರುದ್ಧ ಸ್ವಾಧೀನತಾ) ಅಧಿನಿಯಮ, 1966

## (1966ರ ಸಂಖ್ಯೆ 29)

[16ನೇ ಸೆಪ್ಟೆಂಬರ್, 1966.]

ರೈಲ್ವೆ ಸ್ವತ್ತಿನ ಕಾನೂನು ವಿರುದ್ಧವಾದ ಸ್ವಾಧೀನತೆಗೆ ಸಂಬಂಧಿಸಿದ ಕಾನೂನನ್ನು ಒಟ್ಟುಗೂಡಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ.

ಇದು, ಭಾರತ ಗಣರಾಜ್ಯದ ಹದಿನೇಳನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ರೈಲ್ವೆ ಸ್ವತ್ತಿನ (ಕಾನೂನು ವಿರುದ್ಧ ಸ್ವಾಧೀನತಾ) ಅಧಿನಿಯಮ, 1966 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು, ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) 'ದಳ' ಎಂದರೆ, ರೈಲ್ವೆ ರಕ್ಷಣಾ ದಳ ಅಧಿನಿಯಮ, 1957 (1957ರ 23)ರ 3ನೇ ಪ್ರಕರಣದ ಮೇರೆಗೆ ರಚಿತವಾದ ರೈಲ್ವೆ ರಕ್ಷಣಾ ದಳ;

(ಬಿ) 'ದಳದ ಸದಸ್ಯ' ಎಂದರೆ, ದಳಕ್ಕೆ ನೇಮಕ ಮಾಡಲಾದ ಅದರ ವರಿಷ್ಠಾಧಿಕಾರಿಯಲ್ಲದ ವ್ಯಕ್ತಿ;

(ಸಿ) 'ದಳದ ಅಧಿಕಾರಿ' ಎಂದರೆ, ದಳಕ್ಕೆ ನೇಮಕ ಮಾಡಲಾದ ಅಸಿಸ್ಟೆಂಟ್ ಸಬ್‌ಇನ್ಸ್‌ಪೆಕ್ಟರನ ಮತ್ತು ಅದಕ್ಕೆ ಮೇಲ್ಪಟ್ಟ ದರ್ಜೆಯ ಅಧಿಕಾರಿ ಮತ್ತು ಅದರ ವರಿಷ್ಠಾಧಿಕಾರಿಯನ್ನು ಒಳಗೊಳ್ಳುತ್ತದೆ;

(ಡಿ) 'ರೈಲ್ವೆ ಸ್ವತ್ತು' ಎಂಬುದು ರೈಲ್ವೆ ಆಡಳಿತಕ್ಕೆ ಸೇರಿರುವ ಅಥವಾ ಅದರ ವಶದಲ್ಲಿರುವ ಅಥವಾ ಸ್ವಾಧೀನದಲ್ಲಿರುವ ಯಾವುದೇ ಸರಕುಗಳನ್ನು, ಹಣವನ್ನು ಅಥವಾ ಬೆಲೆ ಬಾಳುವ ಭದ್ರತೆಯನ್ನು ಅಥವಾ ಪ್ರಾಣಿಯನ್ನು ಒಳಗೊಳ್ಳುತ್ತದೆ;

(ಇ) 'ವರಿಷ್ಠಾಧಿಕಾರಿ' ಎಂದರೆ, ರೈಲ್ವೆ ರಕ್ಷಣಾ ದಳ ಅಧಿನಿಯಮ, 1957 (1957ರ 23)ರ 4ನೇ ಪ್ರಕರಣದ ಮೇರೆಗೆ ನೇಮಕಗೊಂಡ ಅಧಿಕಾರಿಗಳಲ್ಲಿ ಯಾರೇ ಅಧಿಕಾರಿ ಮತ್ತು ಇದು ದಳದ ವರಿಷ್ಠಾಧಿಕಾರಿಯಾಗಿ ಕೇಂದ್ರ ಸರ್ಕಾರವು ನೇಮಿಸಿದ ಇತರ ಯಾರೇ ಅಧಿಕಾರಿಯನ್ನು ಒಳಗೊಳ್ಳುತ್ತದೆ;

(ಎಫ್) ಈ ಅಧಿನಿಯಮದಲ್ಲಿ ಉಪಯೋಗಿಸಲಾಗಿರುವ, ಆದರೆ ಪರಿಭಾಷಿತವಾಗಿರದ ಮತ್ತು ಭಾರತೀಯ ರೈಲ್ವೆ ಅಧಿನಿಯಮ, 1890 (1890ರ 9)ರಲ್ಲಿ ಪರಿಭಾಷಿತವಾಗಿರುವ ಪದಗಳು ಮತ್ತು ಪದಾವಳಿಗಳು ಆ ಅಧಿನಿಯಮದ ಅಡಿಯಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಡಲಾಗಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

**3. ರೈಲ್ವೆ ಸ್ವತ್ತಿನ ಕಳುವು, ಅಪ್ರಾಮಾಣಿಕ ದುರ್ವಿನಿಯೋಗ ಅಥವಾ ಕಾನೂನು ವಿರುದ್ಧವಾದ ಸ್ವಾಧೀನತೆಗಾಗಿ ದಂಡನೆ.–** ಕಳವು ಮಾಡಲಾಗಿದೆಯೆಂದು ಅಥವಾ ಕಾನೂನು ವಿರುದ್ಧವಾಗಿ ಪಡೆದುಕೊಳ್ಳಲಾಗಿದೆಯೆಂದು ಸಕಾರಣವಾಗಿ ಸಂಶಯಪಡಲಾಗಿರುವ ಯಾವುದೇ ರೈಲ್ವೆ ಸ್ವತ್ತು ಯಾರೇ ವ್ಯಕ್ತಿಯ ಸ್ವಾಧೀನದಲ್ಲಿರುವುದು ಕಂಡುಬಂದಲ್ಲಿ ಅಥವಾ ಸ್ವಾಧೀನತೆಯಲ್ಲಿತ್ತೆಂದು ರುಜುವಾತಾದಲ್ಲಿ, ಆ ರೈಲ್ವೆ ಸ್ವತ್ತು ಕಾನೂನುಬದ್ಧವಾಗಿ ತನ್ನ ಸ್ವಾಧೀನಕ್ಕೆ ಬಂದಿತೆಂಬುದನ್ನು ಅವನು ರುಜುವಾತುಪಡಿಸಿದ ಹೊರತು, ಅವನು,–

(ಎ) ಮೊದಲನೇ ಅಪರಾಧಕ್ಕಾಗಿ, ಐದು ವರ್ಷಗಳವರೆಗಿನ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು ಮತ್ತು ನ್ಯಾಯಾಲಯದ ತೀರ್ಪಿನಲ್ಲಿ ನಮೂದಿಸಬೇಕಾದ ವಿಶೇಷ ಮತ್ತು ಸಾಕಷ್ಟು ಕಾರಣಗಳು ಇಲ್ಲದಿರುವಲ್ಲಿ, ಅಂಥ ಕಾರಾವಾಸವು ಒಂದು ವರ್ಷಕ್ಕಿಂತ ಕಡಿಮೆ ಇರತಕ್ಕದ್ದಲ್ಲ ಮತ್ತು ಅಂಥ ಜುಲ್ಮಾನೆಯು ಒಂದು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇರತಕ್ಕದ್ದಲ್ಲ.

(ಬಿ) ಎರಡನೆಯ ಅಥವಾ ತರುವಾಯದ ಅಪರಾಧಕ್ಕಾಗಿ, ಐದು ವರ್ಷಗಳವರೆಗಿನ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು ಮತ್ತು ನ್ಯಾಯಾಲಯದ ತೀರ್ಪಿನಲ್ಲಿ ನಮೂದಿಸಬೇಕಾದ ವಿಶೇಷ ಮತ್ತು ಸಾಕಷ್ಟು ಕಾರಣಗಳು ಇಲ್ಲದಿರುವಲ್ಲಿ, ಅಂಥ ಕಾರಾವಾಸವು ಎರಡು ವರ್ಷಗಳಿಗಿಂತ ಕಡಿಮೆ ಇರತಕ್ಕದ್ದಲ್ಲ ಮತ್ತು ಅಂಥ ಜುಲ್ಮಾನೆಯು ಎರಡು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇರತಕ್ಕದ್ದಲ್ಲ.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ, "ಕಳವು" ಮತ್ತು ಅಪ್ರಾಮಾಣಿಕ ದುರ್ವಿನಿಯೋಗ ಎಂಬ ಪದಗಳು ಭಾರತ ದಂಡ ಸಂಹಿತೆ (1860ರ 45)ಯ 378 ಮತ್ತು 403ನೇ ಪ್ರಕರಣಗಳಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

**4. ಅಪರಾಧಗಳ ದುಷ್ಪ್ರೇರಣೆ, ಒಳಸಂಚು ಅಥವಾ ಪರೋಕ್ಷ ಸಮ್ಮತಿಗಾಗಿ ದಂಡನೆ.–** ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧ ಮಾಡುವುದಕ್ಕೆ ದುಷ್ಪ್ರೇರಣೆ ನೀಡುವ ಅಥವಾ ಒಳಸಂಚು ನಡೆಸುವ ಯಾರೇ ವ್ಯಕ್ತಿ ಅಥವಾ ಭೂಮಿ ಅಥವಾ ಕಟ್ಟಡದ ಯಾರೇ ಒಡೆಯನು ಅಥವಾ ಅಧಿಭೋಗದಾರನು ಅಥವಾ ಆ ಭೂಮಿಯ ಅಥವಾ ಕಟ್ಟಡದ ಆಡಳಿತವನ್ನು ಹೊಂದಿರುವ ಅಂಥ ಒಡೆಯನ ಅಥವಾ ಅಧಿಭೋಗದಾರನ ಯಾರೇ ಏಜೆಂಟನು, ಈ ಅಧಿನಿಯಮದ ಉಪಬಂಧಗಳಿಗೆ ವಿರುದ್ಧವಾದ ಅಪರಾಧಕ್ಕೆ ಬುದ್ಧಿಪೂರ್ವಕವಾಗಿ ಪರೋಕ್ಷ ಸಮ್ಮತಿಯನ್ನು ಕೊಟ್ಟರೆ, ಅವನು ಐದು ವರ್ಷಗಳವರೆಗಿನ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ, "ದುಷ್ಪ್ರೇರಣೆ", "ಒಳಸಂಚು" ಎಂಬ ಪದಗಳು ಭಾರತ ದಂಡ ಸಂಹಿತೆ (1860ರ 45)ಯ 107 ಮತ್ತು 120ಎ ಪ್ರಕರಣಗಳಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

**5. ಈ ಅಧಿನಿಯಮ ಮೇರೆಗಿನ ಅಪರಾಧಗಳು ಸಂಜ್ಞೇಯವಾಗತಕ್ಕದ್ದಲ್ಲ.–** ದಂಡ ಪ್ರಕ್ರಿಯಾ ಸಂಹಿತೆ, 1898 (1898ರ 5)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವು ಸಂಜ್ಞೇಯವಾಗತಕ್ಕದ್ದಲ್ಲ.

**6. ವಾರಂಟಿಲ್ಲದೆ ದಸ್ತಗಿರಿ ಮಾಡುವ ಅಧಿಕಾರ.–** ದಳದ ಯಾರೇ ವರಿಷ್ಠಾಧಿಕಾರಿಯು ಅಥವಾ ಸದಸ್ಯನು, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧಕ್ಕೆ ಸಂಬಂಧಿಸಿದ ಯಾರೇ ವ್ಯಕ್ತಿಯನ್ನು ಅಥವಾ ಹಾಗೆ ಸಂಬಂಧಿಸಿರುವನೆಂದು ಸಕಾರಣವಾಗಿ ಸಂಶಯಿಸಬಹುದಾದ ವ್ಯಕ್ತಿಯನ್ನು ಮ್ಯಾಜಿಸ್ಟ್ರೇಟನ ಆದೇಶವಿಲ್ಲದೆ ಅಥವಾ ವಾರಂಟಿಲ್ಲದೆ ದಸ್ತಗಿರಿ ಮಾಡಬಹುದು.

**7. ದಸ್ತಗಿರಿ ಮಾಡಲಾದ ವ್ಯಕ್ತಿಗಳ ಬಗ್ಗೆ ವ್ಯವಸ್ಥೆ.–** ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ ದಸ್ತಗಿರಿ ಮಾಡಲಾದ ಪ್ರತಿಯೊಬ್ಬ ವ್ಯಕ್ತಿಯನ್ನು, ದಳದ ಅಧಿಕಾರಿಯಲ್ಲದೆ ಬೇರೆಯವನು ದಸ್ತಗಿರಿ ಮಾಡಿದ್ದರೆ, ಅವನನ್ನು ವಿಳಂಬವಿಲ್ಲದೆ ಸಮೀಪದಲ್ಲಿರುವ ದಳದ ಅಧಿಕಾರಿಯ ಬಳಿಗೆ ಕಳುಹಿಸತಕ್ಕದ್ದು.

**8. ದಸ್ತಗಿರಿ ಮಾಡಲಾದ ವ್ಯಕ್ತಿಗಳ ವಿರುದ್ಧ ವಿಚಾರಣೆಯನ್ನು ಹೇಗೆ ಮಾಡಬೇಕು.–** (1) ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ ಯಾರೇ ವ್ಯಕ್ತಿಯನ್ನು ದಳದ ಅಧಿಕಾರಿಯು ದಸ್ತಗಿರಿ ಮಾಡಿದಾಗ ಅಥವಾ 7ನೇ ಪ್ರಕರಣದ ಮೇರೆಗೆ ಆ ಅಧಿಕಾರಿಯ ಬಳಿಗೆ ಕಳುಹಿಸಿರುವಾಗ, ಅವನು ಅಂಥ ವ್ಯಕ್ತಿಯ ವಿರುದ್ಧದ ಆಪಾದನೆಯ ಬಗ್ಗೆ ವಿಚಾರಣೆಯನ್ನು ಮಾಡಲು ಉದ್ಯುಕ್ತನಾಗತಕ್ಕದ್ದು.

(2) ಈ ಉದ್ದೇಶಕ್ಕಾಗಿ ದಳದ ಅಧಿಕಾರಿಯು, ದಂಡ ಪ್ರಕ್ರಿಯಾ ಸಂಹಿತೆ, 1898 (1898ರ 5)ರ ಮೇರೆಗೆ, ಸಂಜ್ಞೇಯವಾದ ಮೊಕದ್ದಮೆಯನ್ನು ತನಿಖೆ ಮಾಡುವಾಗ ಪೊಲೀಸ್ ಠಾಣೆಯ ಆಡಳಿತವನ್ನು ಹೊಂದಿರುವ ಅಧಿಕಾರಿಯು ಚಲಾಯಿಸಬಹುದಾದಂಥ ಅಧಿಕಾರಗಳನ್ನೇ ಚಲಾಯಿಸಬಹುದು ಮತ್ತು ಅವನು ಒಳಪಟ್ಟಿರುವಂಥ ಉಪಬಂಧಗಳಿಗೆ ಇವನು ಒಳಪಟ್ಟಿರತಕ್ಕದ್ದು:

ಪರಂತು,–

(ಎ) ಆಪಾದಿತ ವ್ಯಕ್ತಿಯು ವಿರುದ್ಧ ಸಾಕಷ್ಟು ಸಾಕ್ಷ್ಯವಿದೆಯೆಂದು ಅಥವಾ ಸಂಶಯಕ್ಕೆ ಸಕಾರವಾದ ಆಧಾರವಿದೆಯೆಂದು ದಳದ ಅಧಿಕಾರಿಯು ಅಭಿಪ್ರಾಯಪಟ್ಟರೆ, ಮೊಕದ್ದಮೆಯ ಬಗ್ಗೆ ಅಧಿಕಾರವ್ಯಾಪ್ತಿಯುಳ್ಳ ಮ್ಯಾಜಿಸ್ಟ್ರೇಟನ ಮುಂದೆ ಹಾಜರಾಗುವುದಕ್ಕಾಗಿ ಅವನಿಂದ ಜಾಮೀನನ್ನು ತೆಗೆದುಕೊಳ್ಳತಕ್ಕದ್ದು ಅಥವಾ ಅಭಿರಕ್ಷೆಯಲ್ಲಿ ಅಂಥ ಮ್ಯಾಜಿಸ್ಟ್ರೇಟನ ಬಳಿಗೆ ಕಳುಹಿಸತಕ್ಕದ್ದು;

(ಬಿ) ಆಪಾದಿತ ವ್ಯಕ್ತಿಯ ವಿರುದ್ಧ ಸಾಕಷ್ಟು ಸಾಕ್ಷ್ಯವಿಲ್ಲವೆಂದು ಅಥವಾ ಸಂಶಯಕ್ಕೆ ಸಕಾರಣವಾದ ಆಧಾರವಿಲ್ಲವೆಂದು ದಳದ ಅಧಿಕಾರಿಗೆ ಕಂಡುಬಂದರೆ, ಅಧಿಕಾರವ್ಯಾಪ್ತಿಯುಳ್ಳ ಮ್ಯಾಜಿಸ್ಟ್ರೇಟನ ಮುಂದೆ ಹಾಗೆ ಅಗತ್ಯಪಡಿಸಿದರೆ ಮತ್ತು ಅಗತ್ಯಪಡಿಸಿದಾಗ ಹಾಜರಾಗುವುದಕ್ಕಾಗಿ, ದಳದ ಅಧಿಕಾರಿಯು ನಿರ್ದೇಶಿಸಬಹುದಾದಂತೆ ಜಾಮೀನು ಸಹಿತವಾಗಿಯಾಗಲೀ ಅಥವಾ ಜಾಮೀನು ರಹಿತವಾಗಿಯಾಗಲೀ ಮುಚ್ಚಳಿಕೆಯನ್ನು ಬರೆದುಕೊಟ್ಟ ಮೇಲೆ ಆಪಾಧಿತ ವ್ಯಕ್ತಿಯನ್ನು ಬಿಡುಗಡೆ ಮಾಡತಕ್ಕದ್ದು ಮತ್ತು ಆ ಅಧಿಕಾರಿಯು ಮೊಕದ್ದಮೆಯ ಎಲ್ಲಾ ವಿವರಗಳ ಬಗ್ಗೆ ತನ್ನ ಮೇಲಾಧಿಕಾರಿಗೆ ಪೂರ್ಣ ವರದಿಯನ್ನು ಸಲ್ಲಿಸತಕ್ಕದ್ದು.

**9. ಸಾಕ್ಷ್ಯವನ್ನು ಕೊಡಲು ಮತ್ತು ದಸ್ತಾವೇಜುಗಳನ್ನು ಹಾಜರುಪಡಿಸಲು ವ್ಯಕ್ತಿಗಳನ್ನು ಸಮನ್ ಮಾಡುವ ಅಧಿಕಾರ.–** (1) ಅಧಿನಿಯಮದ ಯಾವುದೇ ಉದ್ದೇಶಗಳಿಗಾಗಿ ದಳದ ಅಧಿಕಾರಿಯು ತಾನು ನಡೆಸುತ್ತಿರುವ ಯಾವುದೇ ವಿಚಾರಣೆಯಲ್ಲಿ ಸಾಕ್ಷ್ಯವನ್ನು ಕೊಡಲು ಅಥವಾ ದಸ್ತಾವೇಜನ್ನು ಅಥವಾ ಇತರ ಯಾವುದೇ ವಸ್ತುವನ್ನು ಹಾಜರುಪಡಿಸಲು ಯಾರ ಹಾಜರಾತಿಯು ಅವಶ್ಯಕವೆಂದು ತಾನು

ಪರ್ಯಾಲೋಚಿಸುವನೋ ಆ ಯಾರೇ ವ್ಯಕ್ತಿಯು ಹಾಜರಾಗುವಂತೆ ಸಮನ್ ಮಾಡುವ ಅಧಿಕಾರವನ್ನು ಹೊಂದಿರತಕ್ಕದ್ದು.

(2) ದಸ್ತಾವೇಜುಗಳನ್ನು ಅಥವಾ ಇತರ ವಸ್ತುಗಳನ್ನು ಹಾಜರುಪಡಿಸುವ ಬಗೆಗಿನ ಸಮನ್ ಅಥವಾ ಸಮನ್ ಮಾಡಲಾದ ವ್ಯಕ್ತಿಯ ಸ್ವಾಧೀನದಲ್ಲಿ ಅಥವಾ ನಿಯಂತ್ರಣದಲ್ಲಿ ಇರುವ ಕೆಲವು ನಿರ್ದಿಷ್ಟ ದಸ್ತಾವೇಜುಗಳನ್ನು ಅಥವಾ ವಸ್ತುಗಳನ್ನು ಹಾಜರುಪಡಿಸುವುದಕ್ಕಾಗಿ ಅಥವಾ ನಿರ್ದಿಷ್ಟ ರೀತಿಯ ಎಲ್ಲಾ ದಸ್ತಾವೇಜುಗಳನ್ನು ಅಥವಾ ವಸ್ತುಗಳನ್ನು ಹಾಜರುಪಡಿಸುವುದಕ್ಕಾಗಿಯಾಗಲೀ ಇರಬಹುದು.

(3) ಹಾಗೆ ಸಮನ್ ಮಾಡಲಾದ ಎಲ್ಲಾ ವ್ಯಕ್ತಿಗಳು, ಅಂಥ ಅಧಿಕಾರಿಯು ನಿರ್ದೇಶಿಸಬಹುದಾದಂತೆ ಖುದ್ದಾಗಿ ಅಥವಾ ಅಧಿಕೃತ ಏಜೆಂಟನ ಮೂಲಕ ಹಾಜರಾಗಲು ಬದ್ಧರಾಗಿರತಕ್ಕದ್ದು ಮತ್ತು ಹಾಗೆ ಸಮನ್ ಮಾಡಲಾದ ಎಲ್ಲಾ ವ್ಯಕ್ತಿಗಳು ಯಾವ ವಿಷಯದ ತಮ್ಮನ್ನು ವಿಚಾರಣೆ ಮಾಡಲಾಗುತ್ತಿದೆಯೋ ಅಥವಾ ತಾವು ಹೇಳಿಕೆಗಳನ್ನು ಕೊಡುತ್ತಿರುವರೋ ಆ ಯಾವುದೇ ವಿಷಯದ ಬಗ್ಗೆ ನಿಜವನ್ನು ಹೇಳು ಅಥವಾ ಅಗತ್ಯಗೊಳಿಸಬಹುದಾದಂಥ ದಸ್ತಾವೇಜುಗಳನ್ನು ಮತ್ತು ಇತರ ವಸ್ತುಗಳನ್ನು ಮತ್ತು ಇತರ ವಸ್ತುಗಳನ್ನು ಹಾಜರುಪಡಿಸಲು ಬದ್ಧರಾಗಿರತಕ್ಕದ್ದು:

ಪರಂತು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ 132ನೇ ಮತ್ತು 133ನೇ ಪ್ರಕರಣಗಳ ಮೇರೆಗಿನ ವಿನಾಯಿತಿಗಳು, ಈ ಪ್ರಕರಣದ ಮೇರೆಗೆ ಹಾಜರಾತಿಯ ಅಗತ್ಯತೆಗಳಿಗೆ ಅನ್ವಯವಾಗತಕ್ಕದ್ದು.

(4) ಮೇಲೆ ಹೇಳಿದಂಥ ಪ್ರತಿಯೊಂದು ವಿಚಾರಣೆಯನ್ನು, ಭಾರತ ದಂಡ ಸಂಹಿತೆ, 1860 (1860ರ 45)ರ 193ನೇ ಮತ್ತು 228ನೇ ಪ್ರಕರಣಗಳ ಅರ್ಥವ್ಯಾಪ್ತಿಯಲ್ಲಿ 'ನ್ಯಾಯಿಕ ವ್ಯವಹರಣೆ' ಎಂದು ಭಾವಿಸತಕ್ಕದ್ದು.

**10. ಶೋಧನಾ ವಾರಂಟನ್ನು ಹೊರಡಿಸುವುದು.-** (1) ಕಳುವಾಗಿರುವ ಅಥವಾ ಕಾನೂನು ವಿರುದ್ಧವಾಗಿ ಪಡೆದಿರುವ ರೈಲ್ವೆ ಸ್ವತ್ತನ್ನು ದಾಸ್ತಾನು ಮಾಡಲು ಅಥವಾ ಮಾರಾಟ ಮಾಡಲು ಯಾವುದೇ ಸ್ಥಳವನ್ನು ಉಪಯೋಗಿಸಲಾಗಿದೆಯೆಂದು ದಳದ ಅಧಿಕಾರಿಗೆ ನಂಬಲು ಕಾರಣವಿದ್ದರೆ, ಆ ಸ್ಥಳವು ಇರುವ ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿಯುಳ್ಳ ಮ್ಯಾಜಿಸ್ಟ್ರೇಟನಿಗೆ ಶೋಧನಾ ವಾರಂಟನ್ನು ಹೊರಡಿಸುವಂತೆ ಕೋರಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ಯಾರಿಗೆ ಅರ್ಜಿಯನ್ನು ಸಲ್ಲಿಸಲಾಗಿದೆಯೋ ಆ ಮ್ಯಾಜಿಸ್ಟ್ರೇಟನು ತಾನು ಅವಶ್ಯಕವೆಂದು ಆಲೋಚಿಸುವಂಥ ವಿಚಾರಣೆಯನ್ನು ಮಾಡಿದ ತರುವಾಯ, ತನ್ನ ವಾರಂಟಿನ ಮೂಲಕ ದಳದ ಯಾರೇ ಅಧಿಕಾರಿಯನ್ನು,-

(ಎ) ಅಗತ್ಯವಾಗಬಹುದಾದಂಥ ಸಹಾಯದೊಂದಿಗೆ ಅಂಥ ಸ್ಥಳಕ್ಕೆ ಪ್ರವೇಶಿಸಲು;

(ಬಿ) ವಾರಂಟಿನಲ್ಲಿ ನಿರ್ದಿಷ್ಟಪಡಿಸಿರುವ ರೀತಿಯಲ್ಲಿ ಅದನ್ನು ಶೋಧನೆ ಮಾಡಲು;

(ಸಿ) ಕಳವು ಮಾಡಲಾಗಿದೆಯೆಂದು ಅಥವಾ ಕಾನೂನು ವಿರುದ್ಧವಾಗಿ ಪಡೆದುಕೊಳ್ಳಲಾಗಿದೆಯೆಂದು ಅವನು ಸಕಾರಣವಾಗಿ ಸಂಶಯಪಡುವ, ಅಲ್ಲಿ ಕಂಡುಬಂದ ಯಾವುದೇ ರೈಲ್ವೆ ಸ್ವತ್ತನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು; ಮತ್ತು

(ಡಿ) ಅಂಥ ರೈಲ್ವೇ ಸ್ವತ್ತನ್ನು ಮ್ಯಾಜಿಸ್ಟ್ರೇಟನ ಮುಂದೆ ತರಲು ಅಥವಾ ಅಪರಾಧಿಯನ್ನು ಮ್ಯಾಜಿಸ್ಟ್ರೇಟನ ಮುಂದೆ ಕರೆತರುವ ತನಕ ಅದನ್ನು ಆ ಸ್ಥಳದಲ್ಲಿಯೇ ರಕ್ಷಿಸಲು ಅಥವಾ ಅನ್ಯಥಾ ಯಾವುದೇ ಸುರಕ್ಷಿತ ಸ್ಥಳಕ್ಕೆ ಅದನ್ನು ಸ್ಥಳಾಂತರಿಸಲು

– ಅಧಿಕೃತಗೊಳಿಸಬಹುದು.

**11. ಶೋಧನೆಗಳನ್ನು ಮತ್ತು ದಸ್ತಗಿರಿಗಳನ್ನು ಹೇಗೆ ಮಾಡಬೇಕು.–** ಈ ಅಧಿನಿಯಮದ ಮೇರೆಗೆ ಮಾಡಲಾಗುವ ಎಲ್ಲಾ ಶೋಧನೆಗಳನ್ನು ಮತ್ತು ದಸ್ತಗಿರಿಗಳನ್ನು ದಂಡ ಪ್ರಕ್ರಿಯಾ ಸಂಹಿತೆ, 1898 (1898ರ 5)ರಲ್ಲಿ ಅನುಕ್ರಮವಾಗಿ ಶೋಧನೆಗಳಿಗೆ ಮತ್ತು ದಸ್ತಗಿರಿಗಳಿಗೆ ಸಂಬಂಧಿಸಿದ ಉಪಬಂಧಗಳಿಗೆ ಅನುಸಾರವಾಗಿ ಮಾಡತಕ್ಕದ್ದು.

**12. ಸಹಾಯ ಮಾಡಲು ಅಗತ್ಯಪಡಿಸಲಾದ ಅಧಿಕಾರಿಗಳು.–** ಈ ಅಧಿನಿಯಮವನ್ನು ಜಾರಿಗೊಳಿಸುವಲ್ಲಿ ದಳದ ವರಿಷ್ಠಾಧಿಕಾರಿಗಳಿಗೆ ಮತ್ತು ಸದಸ್ಯರಿಗೆ ಸಹಾಯ ಮಾಡಲು ಎಲ್ಲಾ ಸರ್ಕಾರಿ ಅಧಿಕಾರಿಗಳಿಗೆ ಮತ್ತು ಗ್ರಾಮಾಧಿಕಾರಿಗಳಿಗೆ ಈ ಮೂಲಕ ಅಧಿಕಾರ ಕೊಡಲಾಗಿದೆ ಮತ್ತು ಅಗತ್ಯಪಡಿಸಲಾಗಿದೆ.

**13. ವಾಹನ, ಇತ್ಯಾದಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಆದೇಶಿಸಲು ನ್ಯಾಯಾಲಯಗಳಿಗಿರುವ ಅಧಿಕಾರ.–** ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧದ ಅಧಿವಿಚಾರಣೆಯನ್ನು ನಡೆಸುತ್ತಿರುವ ಯಾವುದೇ ನ್ಯಾಯಾಲಯವು, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಯಾವ ಸ್ವತ್ತಿನ ಬಗ್ಗೆ ಮಾಡಲಾಗಿದೆಯೆಂದು ನ್ಯಾಯಾಲಯಕ್ಕೆ ಮನದಟ್ಟಾಗುವುದೋ ಆ ಯಾವುದೇ ಸ್ವತ್ತನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತೆ ಆದೇಶವನ್ನು ಮಾಡಬಹುದು ಮತ್ತು ಅಂಥ ಸ್ವತ್ತು ಯಾವ ಪಾತ್ರಗಳಲ್ಲಿ, ಕಟ್ಟುಗಳಲ್ಲಿ ಅಥವಾ ಹೊದಿಕೆಗಳಲ್ಲಿರುತ್ತದೆಯೋ ಆ ಪಾತ್ರಗಳನ್ನು, ಕಟ್ಟುಗಳನ್ನು ಅಥವಾ ಹೊದಿಕೆಗಳನ್ನು ಮತ್ತು ಆ ಸ್ವತ್ತನ್ನು ಸಾಗಿಸಲು ಉಪಯೋಗಿಸಲಾಗಿರುವ

ಪ್ರಾಣಿಗಳನ್ನು, ವಾಹನಗಳನ್ನು ಅಥವಾ ಇತರ ಸಾಗಣೆ ಸಾಧನಗಳನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆಯೂ ಆದೇಶಿಸಬಹುದು.

**14. ಇತರ ಕಾನೂನುಗಳನ್ನು ಈ ಅಧಿನಿಯಮವು ಅಧ್ಯಾರೋಹಿಸತಕ್ಕದ್ದು.–** ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಇವುಗಳಿಗೆ ಅಸಂಗತವಾದುದು ಏನೇ ಇದ್ದರೂ ಪರಿಣಾಮಕಾರಿಯಾಗತಕ್ಕದ್ದು.

**15. [ಬಿಟ್ಟುಬಿಡಲಾಗಿದೆ.]**

**16. ನಿರಸನ ಮತ್ತು ಉಳಿಸುವಿಕೆಗಳು.–** (1) ರೈಲ್ವೆ ದಾಸ್ತಾನು ಸರಕುಗಳ (ಕಾನೂನು ವಿರುದ್ಧ ಸ್ವಾಧೀನತಾ) ಅಧಿನಿಯಮ, 1955 (1955ರ 51) ಇದನ್ನು ಈ ಮೂಲಕ ನಿರಸಿತಗೊಳಿಸಲಾಗಿದೆ.

(2) ಈ ಅಧಿನಿಯಮದಲ್ಲಿ ಇರುವುದು ಯಾವುದೂ ಈ ಮೂಲಕ ನಿರಸಿತಗೊಳಿಸಲಾದ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧಗಳಿಗೆ ಅನ್ವಯಿಸತಕ್ಕದ್ದಲ್ಲ ಮತ್ತು ಅಂಥ ಅಪರಾಧಗಳನ್ನು, ಈ ಅಧಿನಿಯಮವನ್ನು ಅಂಗೀಕರಿಸಲಾಗಿರದಿದ್ದರೆ ಹೇಗೋ ಹಾಗೆ, ತನಿಖೆ ಮಾಡಬಹುದು ಮತ್ತು ಅಧಿವಿಚಾರಣೆ ಮಾಡಬಹುದು.

(3) ಉಪಪ್ರಕರಣ (2)ರಲ್ಲಿನ ನಿರ್ದಿಷ್ಟ ವಿಷಯಗಳ ನಮೂದನೆಯು, ನಿರಸನಗಳ ಪರಿಣಾಮಕ್ಕೆ ಸಂಬಂಧಿಸಿದಂತೆ ಸಾಮಾನ್ಯ ಖಂಡಗಳ ಅಧಿನಿಯಮ, 1897 (1897ರ 10)ರ 6ನೇ ಪ್ರಕರಣಕ್ಕೆ ಪ್ರತಿಕೂಲ ಪರಿಣಾಮ ಉಂಟುಮಾಡುತ್ತದೆ ಎಂದು ಅಥವಾ ಅದಕ್ಕೆ ಬಾಧೆಯುಂಟುಮಾಡುತ್ತದೆಂದು ತಿಳಿಯತಕ್ಕದ್ದಲ್ಲ.